ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಘನತೆವೆತ್ತ ರಾಜ್ಯಪಾಲರಾದ ಶ್ರೀ ರಾಮೇಶ್ವರ್ ಠಾಕೂರ್‌ರವರು ಮಧ್ಯಾಹ್ನ 12.15 ಗಂಟೆಗೆ ವಿಧಾನಸೌಧದ ಮಹಾದ್ವಾರದ ಬೃಹತ್ ಮೆಟ್ಟಿಲುಗಳ ಬಳಿಗೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಸಭಾಧ್ಯಕ್ಷರು, ಮಾನ್ಯ ಸಭಾಪತಿಯವರು, ಮಾನ್ಯ ಮುಖ್ಯಮಂತ್ರಿಗಳು, ವಿಧಾನ ಮಂಡಲದ ಪ್ರಧಾನ ಕಾರ್ಯದರ್ಶಿ, ವಿಧಾನ ಸಭೆ ಸಚಿವಾಲಯದ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿಗಳೂ ಸ್ವಾಗತಿಸಿ, ಪೂರ್ವ ಭಾಗದ ಮೆಟ್ಟಿಲುಗಳ ಮೂಲಕ ಮಹಾದ್ವಾರದ ಬಳಿ ಕರೆದುಕೊಂಡು ಬಂದರು. ಅಲ್ಲಿ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯಲ್ಲಿ ರೂಪಿಸಲಾಯಿತು.

ಶ್ರೀ ಎಸ್.ಬಿ.ಪಾಟೀಲ್	**ಶ್ರೀ ಡಿಸೋಜಾ ರಾಬಿನ್‌ಸನ್**
ಕಾರ್ಯದರ್ಶಿ	ಪ್ರಧಾನ ಕಾರ್ಯದರ್ಶಿ
ವಿಧಾನ ಸಭೆ	ವಿಧಾನ ಮಂಡಲ
ಶ್ರೀ ವಿ.ಶ್ರೀಶ್	**ಶ್ರೀ ಜಗದೀಶ್ ಶೆಟ್ಟರ್**
ಕಾರ್ಯದರ್ಶಿ	ಮಾನ್ಯ ಸಭಾಧ್ಯಕ್ಷರು
ವಿಧಾನ ಪರಿಷತ್ತು	
ಪ್ರೊ.ಬಿ.ಕೆ.ಚಂದ್ರಶೇಖರ್	**ಶ್ರೀ ರಾಮೇಶ್ವರ್ ಠಾಕೂರ್**
ಮಾನ್ಯ ಸಭಾಪತಿಗಳು	ರಾಜ್ಯಪಾಲರು

ಎ.ಡಿ.ಸಿ.

ಈ ರೀತಿ ಮೆರವಣಿಗೆಯು ವಿಧಾನ ಸಭೆಯ ಸಭಾಂಗಣದ ಕಡೆಗೆ ಆಗಮಿಸಿತು. ಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ, ಸನ್ಮಾನ್ಯ ರಾಜ್ಯಪಾಲರ ಆಗಮನವನ್ನು ಸಭೆಗೆ ಮಾರ್ಷಲ್‌ರವರು ತಿಳಿಸಿದರು. ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು. ಮೆರವಣಿಗೆಯು ವೇದಿಕೆಯ ಕಡೆಗೆ ಮುಂದುವರೆಯಿತು. ಸಭಾಭನವದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ರಾಜ್ಯಪಾಲರು ವೇದಿಕೆಯ ಮೇಲಿರುವ ತಮ್ಮ ಆಸನವನ್ನು ತಲುಪಿದ

ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ವೇದಿಕೆಯ ಮೇಲೆ ಮಾನ್ಯ ಸಭಾಧ್ಯಕ್ಷರವರು ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ಮಾನ್ಯ ರಾಜ್ಯಪಾಲರು ಮಧ್ಯದಲ್ಲಿರುವ ಆಸನದಲ್ಲಿ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳು ವೇದಿಕೆಯ ಮುಂದಿರುವ ಆಸನದಲ್ಲಿ ಕುಳಿತುಕೊಂಡರು.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ: ಕಬ್ಬಿನ ಬೆಂಬಲ ಬೆಲೆ ನಿಗದಿಯಾಗಬೇಕಾಗಿತ್ತು. ಆದರೆ, ಇದುವರೆಗೂ ಆಗಿಲ್ಲ. ಇವತ್ತಿಗೂ ರಾಜ್ಯದ ರೈತರು, ಕಬ್ಬಿನ ಬೆಳೆಗಾರರು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಘೋಷಣೆ ಮಾಡಿದಂಥ 160 ರೂ. ಬೆಲೆಯನ್ನು ಕೂಡಲೇ ಬಿಡುಗಡೆ ಮಾಡಬೇಕು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ಮಾನ್ಯ ರಾಜ್ಯಪಾಲರೆ, ...

(ಗೊಂದಲ)

1. ರಾಜ್ಯಪಾಲರ ಭಾಷಣ

ಸನ್ಮಾನ್ಯ ರಾಜ್ಯಪಾಲರು :

ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸಭಾಧ್ಯಕ್ಷರೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರೆ, ಸನ್ಮಾನ್ಯ ಸಚಿವರುಗಳೆ, ಸನ್ಮಾನ್ಯ ಸದಸ್ಯರುಗಳೇ, ...

(ಗೊಂದಲ)

ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಸುಮಾರು ಆರು ತಿಂಗಳಿಗಿಂತಲೂ ಹೆಚ್ಚಿನ ಅವಧಿಯ ರಾಷ್ಟ್ರಪತಿ ಆಡಳಿತದ ನಂತರ ರಾಜ್ಯವು ಹೊಸದಾಗಿ ಚುನಾಯಿತವಾದ ವಿಧಾನಸಭೆಯನ್ನು ಹೊಂದಿದ್ದು, ಈ ವಿಧಾನ ಸಭೆಯಲ್ಲಿ 90 ಸದಸ್ಯರು ಮೊದಲ ಬಾರಿಗೆ ಸದಸ್ಯರಾಗುತ್ತಿದ್ದಾರೆ. ಹೊಸದಾಗಿ ಬಂದ ಸದಸ್ಯರಿಗೆ ಇದು ವಿಶೇಷ ಸಂದರ್ಭವಾಗಿದೆ.

2. ಕರ್ನಾಟಕ ರಾಜ್ಯವು ದೀರ್ಘಾವಧಿಯ ರಾಜಕೀಯ ಏರಿಳಿತ ಮತ್ತು ರಾಷ್ಟ್ರಪತಿ ಆಡಳಿತವನ್ನು ದಾಟಿ ಬಂದಿದೆ. ಕರ್ನಾಟಕ ರಾಜ್ಯದ ಜನತೆಯು ತಮ್ಮ ಜನಾದೇಶವನ್ನು ನೀಡಿ ಭಾರತೀಯ ಜನತಾ ಪಕ್ಷದ ನೇತೃತ್ವದ ಸರ್ಕಾ

ರವು ಈಗ ಅಧಿಕಾರದಲ್ಲಿ ಇರುವುದಕ್ಕೆ ನಾನು ಸಂತೋಷಪಡುತ್ತೇನೆ. ವಿಧಾನ ಸಭೆಯ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಿ ಕೊಟ್ಟಿರುವುದಕ್ಕೆ ನಾನು ರಾಜ್ಯದ ಜನತೆಯನ್ನು ಅಭಿನಂದಿಸುತ್ತೇನೆ.

3. ಶಕ್ತಿಶಾಲಿ ಹಾಗೂ ಸಮೃದ್ಧ ಕರ್ನಾಟಕ ನಿರ್ಮಾಣ ಮಾಡಲು ಅಭಿವೃದ್ಧಿ ಮತ್ತು ಸ್ಪಂದನಶೀಲ ಆಡಳಿತವನ್ನು ನೀಡುವುದು ನಮ್ಮ ಧ್ಯೇಯವಾಗಿದೆ. ರಾಜ್ಯದ ಜನತೆಯೂ ಸಹ ಇಂಥ ಒಂದು ಆಡಳಿತಕ್ಕೆ ಜನಾದೇಶ ನೀಡಿದ್ದಾರೆ. ಈ ಸಂಕಲ್ಪದ ಸಾಕಾರಕ್ಕೆ ಶೀಘ್ರವೇ ಚಾಲನೆ ನೀಡಲಾಗುವುದು.

4. ಸಮೃದ್ಧ ಕರ್ನಾಟಕ ನಿರ್ಮಾಣದ ದಿಶೆಯಲ್ಲಿ ನನ್ನ ಸರ್ಕಾರವು ರಾಜ್ಯದ ಜನತೆಗೆ ಕೆಳಕಂಡ ಐದು ಮೂಲಭೂತ ಅವಶ್ಯಕತೆಯನ್ನು ಒದಗಿಸಲು ಕಟಿಬದ್ಧವಾಗಿದೆ.

ಅ) ಆಹಾರ

ಆ) ಆರೋಗ್ಯ

ಇ) ಶಿಕ್ಷಣ

ಈ) ವಸತಿ

ಉ) ಶಾಂತಿ–ಸಾಮಾಜಿಕ ನ್ಯಾಯ

ಈ ಮೂಲಭೂತ ಅವಶ್ಯಕತೆಗಳನ್ನು ಒದಗಿಸಲು ಅನುಕೂಲವಾಗುವಂತೆ ನನ್ನ ಸರಕಾರವು ಬಡತನದ ವ್ಯಾಖ್ಯೆಯನ್ನು ಪರಾಮರ್ಶಿಸಿ ಕುಟುಂಬಗಳನ್ನು ಅತ್ಯಂತ ಬಡವರು ಮತ್ತು ಬಡವರು ಎಂದು ಪುನರ್ ವ್ಯಾಖ್ಯಾನಿಸಲು ಉದ್ದೇಶಿಸಿದೆ.

5. ಸಮೃದ್ಧಿ ಹಾಗೂ ಸುಖೀ ರಾಜ್ಯದ ಸಾಕಾರಕ್ಕೆ ಕಾನೂನು ಸುವ್ಯವಸ್ಥೆ ಅತೀ ಅಗತ್ಯವೆನ್ನುವುದು ನಿಮಗೆಲ್ಲರಿಗೂ ತಿಳಿದಿದೆ. ನನ್ನ ಸರಕಾರವು ಈ ವಿಚಾರದಲ್ಲಿ ಪ್ರಥಮ ಆದ್ಯತೆ ನೀಡಿ ಎಲ್ಲ ಸಮುದಾಯದವರೊಳಗೆ ಸೌಹಾರ್ದತೆ ಹಾಗೂ ಶಾಂತಿಯನ್ನು ಕಾಪಾಡಲು ನಿರಂತರ ಎಚ್ಚರವಹಿಸುವುದು. ಭಯೋತ್ಪಾದಕ, ದೇಶದ್ರೋಹಿ ಚಟುವಟಿಕೆಗಳನ್ನು ಹತ್ತಿಕ್ಕಲು ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು. ಈ ವಿಚಾರದಲ್ಲಿ ಕೇಂದ್ರ ಸರಕಾರವೂ ನಮಗೆ ಎಲ್ಲ ಸಹಕಾರ ನೀಡುವುದೆನ್ನುವ ವಿಶ್ವಾಸ ನನ್ನದು. ಸಮಾಜಘಾತಕ ಶಕ್ತಿಗಳಾದ ಸರ್ಕಾರಿ ಆಸ್ತಿ ಕಬಳಿಸುವವರು, ಕಾಳಸಂತೆಕೋರರು ಮುಂತಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

6. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ನನ್ನ ಸರ್ಕಾರ ಬದ್ಧವಾಗಿದೆ. ಇದರಲ್ಲಿ ಪ್ರಮುಖವಾಗಿ ರೈತರ ಸ್ಥಿತಿಗತಿಗಳನ್ನು ಸುಧಾರಿಸಲು ಹಲವಾರು ಯೋಜನೆಗಳನ್ನು ರೂಪಿಸಲು ಉದ್ದೇಶಿಸಿದೆ. ಅಂತೆಯೇ ಕೃಷಿ ರಂಗವನ್ನು ಪುನಶ್ಚೇತನಗೊಳಿಸಲು ಹಲವಾರು ದೃಢ ಹೆಜ್ಜೆಗಳನ್ನು ಇಡಲಿದೆ. ಇದರಲ್ಲಿ ಒಣಭೂಮಿ ಬೇಸಾಯ, ಕೆರೆಗಳ ಹೂಳೆತ್ತುವಿಕೆ, ಅಂತರ್ಜಲ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು ಸೇರಿವೆ.

7. ಮಹಿಳೆಯರ ಗೌರವಯುತ ಸ್ವಾವಲಂಬಿ ಬದುಕಿಗೆ ಆಸ್ಪದ ನೀಡುವ ಹಾಗೂ ಎಲ್ಲಾ ಸರ್ಕಾರಿ, ಸ್ಥಳೀಯ ಸಂಸ್ಥೆಗಳ ನಿರ್ಧಾರಗಳಲ್ಲಿ ಪಾಲ್ಗೊಳ್ಳುವ ಅವಕಾಶ ಹೆಚ್ಚಿಸುವುದೇ ನನ್ನ ಸರ್ಕಾರದ ಗುರಿ. ಬಡತನ ರೇಖೆಗಿಂತ ಕೆಳಗಿನ ಕುಟುಂಬದ ಎಲ್ಲಾ ವಿದ್ಯಾರ್ಥಿನಿಯರಿಗೆ ಪದವಿಯವರೆಗೆ ಉಚಿತ ಶಿಕ್ಷಣ, ಉದ್ಯೋಗ ಸ್ಥಳ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಮಹಿಳೆಯರ ಮೇಲಾಗುವ ಕಿರುಕುಳದಿಂದ ರಕ್ಷಿಸಲು ಕಾನೂನು ರಚನೆ, ತಾಲ್ಲೂಕು ಕೇಂದ್ರಗಳಲ್ಲಿ "ಸ್ತ್ರೀಶಕ್ತಿ ಭವನ" ನಿರ್ಮಾಣ, ಮಹಿಳಾ ಉದ್ಯಮಿಗಳಿಗೆ ಮಾರ್ಗದರ್ಶನ ವ್ಯವಸ್ಥೆ ಮತ್ತು ಪ್ರೋತ್ಸಾಹ, ಉದ್ಯೋಗಸ್ಥ ಮಹಿಳೆಯರಿಗೆ ಹಾಸ್ಟೆಲ್ ನಿರ್ಮಾಣಕ್ಕೆ ಮುಂದೆ ಬರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಂಪನ್ಮೂಲ ಒದಗಿಸಲಾಗುವುದು. ಮಹಿಳಾ ಸ್ವ-ಸಹಾಯ ಗುಂಪುಗಳನ್ನು ಬಲಪಡಿಸಲಾಗುವುದು.

8. ಶಿಕ್ಷಣ ಮತ್ತು ಆರೋಗ್ಯ, ಪ್ರಗತಿಗೆ ಮೂಲಾಧಾರ. ನಮ್ಮ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸಲು ಹಾಗೂ ಎಲ್ಲಾ ಹಂತಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಲು ನನ್ನ ಸರ್ಕಾರ ಶ್ರಮಿಸುವುದು. ಬಡವರಿಗೆ ಉತ್ತಮ ಆರೋಗ್ಯ ಸೌಲಭ್ಯವನ್ನು ಒದಗಿಸಲು ಸಮುದಾಯ ಆರೋಗ್ಯ ವಿಮೆಯನ್ನು ಜಾರಿಗೆ ತರಲಾಗುವುದು. ಯುವಜನತೆಗೆ ಉದ್ಯೋಗಾವಕಾಶ ಕಲ್ಪಿಸುವುದು ನನ್ನ ಸರ್ಕಾರದ ಗುರಿ. ಈ ದಿಶೆಯಲ್ಲಿ ಎಲ್ಲಾ ತರಹದ ವೃತ್ತಿ ಪ್ರಾವೀಣ್ಯತೆ ಪಡೆಯಲು ತರಬೇತಿ ವ್ಯವಸ್ಥೆಗಾಗಿ ಸೂಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

9. ನನ್ನ ಸರ್ಕಾರವು ಮೂಲ ಸೌಲಭ್ಯ ಅಭಿವೃದ್ಧಿಗೆ ಒತ್ತು ಕೊಡುವುದು. ಮುಂದಿನ 5 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಇಮ್ಮಡಿಗೊಳಿಸಿ 10 ಸಾವಿರ ಮೆಗಾವ್ಯಾಟ್‌ಗೆ ಏರಿಸಲಾಗುವುದು. ರಾಜ್ಯದಲ್ಲಿ ಖಾಸಗಿಯವರಿಗೆ ವಿದ್ಯುತ್ ವಲಯದಲ್ಲಿ ಪ್ರೋತ್ಸಾಹ ನೀಡಲಾಗುವುದು. ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರದಿಂದ ಬಂಡವಾಳ ಹೂಡುವಂತೆ ಒತ್ತಾಯ ಮಾಡಲಾಗುವುದು. ಗಾಳಿ, ಸೌರಶಕ್ತಿ ಮುಂತಾದ ಶಕ್ತಿ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ

ಸುಧಾರಿಸಲು ಪ್ರತ್ಯೇಕ ಗ್ರಿಡ್ ಸ್ಥಾಪನೆ ಬಗ್ಗೆ ಚಿಂತನೆ ಮಾಡಲಾಗುವುದು.

10. ಎಲ್ಲಾ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸುವುದು ಹಾಗೂ ಸಮಸ್ಯೆ ಇರತಕ್ಕಂತಹ ಗ್ರಾಮೀಣ ಪ್ರದೇಶಗಳಲ್ಲಿ ನೀರು ಪೂರೈಕೆಗಾಗಿ ಸಮಗ್ರ ಯೋಜನೆಯನ್ನು ತಯಾರಿಸಲು ಉದ್ದೇಶಿಸಿದೆ.

11. ನನ್ನ ಸರ್ಕಾರವು ರಾಜ್ಯದ ನೀರಾವರಿ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಲು ಸೂಕ್ತ ಕ್ರಮ ಕೈಗೊಳ್ಳುವುದಲ್ಲದೆ, ಕೃಷ್ಣಾ ಮತ್ತು ಕಾವೇರಿ ಕಣಿವೆಯ ನಮ್ಮ ಪಾಲಿನ ಬಾಕಿ ಉಳಿದಿರುವ ನೀರನ್ನು ಶೀಘ್ರವಾಗಿ ಉಪಯೋಗಿಸಲು ಕ್ರಮ ಕೈಗೊಳ್ಳಲಿದೆ. ಕಳಸಾ ಬಂಡೂರಿ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ತ್ವರಿತ ಕ್ರಮ ಕೈಗೊಳ್ಳಲಾಗುವುದು. ಕಾವೇರಿ ನ್ಯಾಯಾಧಿಕರಣದ ತೀರ್ಪಿನಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸಿ ಕರ್ನಾಟಕದ ಹಿತರಕ್ಷಣೆಗೆ ಸರ್ವ ಪ್ರಯತ್ನವನ್ನು ಮಾಡಲು ನನ್ನ ಸರ್ಕಾರವು ಕಟಿಬದ್ಧವಾಗಿದೆ.

12. ನನ್ನ ಸರ್ಕಾರವು ಸಮರ್ಪಕ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಿ ಈ ಬಗ್ಗೆ ಮಾಸ್ಟರ್‌ಪ್ಲಾನ್ ರಚಿಸುವುದು. ಕೆಲವೊಂದು ರಸ್ತೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು. ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಹೊಸ ರಸ್ತೆ ನಿರ್ಮಾಣಕ್ಕೆ ಮತ್ತು ಅಗಲೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು. ರಾಷ್ಟ್ರೀಯ ಹೆದ್ದಾರಿಗಳನ್ನು, ತ್ವರಿತಗತಿಯಲ್ಲಿ ಅಭಿವೃದ್ಧಿಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುವುದು. ಬಂದರುಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ರೂಪಿಸಲಾಗುವುದು.

13. ರಾಜ್ಯದಲ್ಲಿ ಕೈಗೊಂಡಿರುವ ರೈಲ್ವೆ ಯೋಜನೆಗಳನ್ನು ತುರ್ತಾಗಿ ಸಂಪೂರ್ಣಗೊಳಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು. ಇದಲ್ಲದೆ ರಾಜ್ಯದಲ್ಲಿ ಹೊಸದಾಗಿ ರೈಲ್ವೆ ಯೋಜನೆಗಳನ್ನು ಕೈಗೊಳ್ಳಲು ಕೋರಲಾಗುವುದು. ಗುಲ್ಬರ್ಗಾ, ಶಿವಮೊಗ್ಗ, ಹಾಸನ ಮತ್ತು ಬಿಜಾಪುರ ಜಿಲ್ಲಾ ಕೇಂದ್ರಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾರ್ಯ ಪ್ರಾರಂಭ ಮಾಡಲಾಗುವುದು.

14. ನನ್ನ ಸರ್ಕಾರವು ಕೈಗಾರಿಕೆಗಳ ಅಭಿವೃದ್ಧಿಗೆ ಅನುಕೂಲ ವಾತಾವರಣವನ್ನು ಕಲ್ಪಿಸುವುದು. ಪ್ರಾದೇಶಿಕ ವಿಶೇಷತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಉಕ್ಕು

ವಲಯ, ಸಿಮೆಂಟ್ ವಲಯ, ಆಹಾರ ಸಂಸ್ಕರಣಾ ವಲಯ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಪಾರ್ಕ್‌ಗಳ ನಿರ್ಮಾಣಕ್ಕೆ ಚಾಲನೆ ನೀಡಲು ಉದ್ದೇಶಿಸಿದೆ. ರಾಜ್ಯದ ವಿವಿಧ ಹಿಂದುಳಿದ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಖಾಸಗಿ ವಲಯದವರಿಗೆ ಹೆಚ್ಚಿನ ಉತ್ತೇಜನ ನೀಡಲಾಗುವುದು.

15. ಮಾಹಿತಿ ತಂತ್ರಜ್ಞಾನದ ಫಲ ಪ್ರತಿ ಹಳ್ಳಿಗೂ ಮುಟ್ಟಬೇಕು. ಗ್ರಾಮಗಳಲ್ಲಿ ಸುಸಜ್ಜಿತ ಸಮುದಾಯ ಭವನವನ್ನು ನಿರ್ಮಿಸಿ ಅಲ್ಲಿ ಸೈಬರ್ ಕೆಫೆಯನ್ನು ಸ್ಥಾಪಿಸಿ ಶಿಕ್ಷಣ, ಕೃಷಿ ಹವಾಮಾನ, ಉದ್ಯೋಗ ಮಾಹಿತಿ, ಬೆಲೆಗಳ ಮಾಹಿತಿ, ಇತ್ಯಾದಿಗಳನ್ನು ಗ್ರಾಮಸ್ಥರಿಗೆ ಒದಗಿಸಲು ಉದ್ದೇಶಿಸಲಾಗಿದೆ. ಇದರಿಂದ ಸರ್ಕಾರದೊಂದಿಗೆ ರೈತರು ಸುಗಮ ಹಾಗೂ ಶೀಘ್ರ ಸಂಪರ್ಕವನ್ನು ಹೊಂದಲು ಅನುಕೂಲವಾಗುತ್ತದೆ.

16. ಹಿಂದುಳಿದ, ಪರಿಶಿಷ್ಟ ಜಾತಿ ಪಂಗಡಗಳ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೆ ನನ್ನ ಸರ್ಕಾರ ಕಟಿಬದ್ಧವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಸತಿ ನಿಲಯಗಳಿಗೆ ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಪರಿಶಿಷ್ಟರ ಕಾಲೋನಿಯ ರಸ್ತೆ, ನೀರು, ಸ್ವಚ್ಛತೆ, ಶಾಲೆ, ಆಸ್ಪತ್ರೆ, ದೀಪಗಳ ವ್ಯವಸ್ಥೆಗೆ ವಿಶೇಷ ಗಮನಹರಿಸಲಾಗುವುದು.

17. ಅಲ್ಪಸಂಖ್ಯಾತರಿಗೆ ಸ್ವ–ಉದ್ಯೋಗ ತರಬೇತಿ ಕೇಂದ್ರ ಪ್ರಾರಂಭಿಸಲು ನೆರವು ನೀಡಲಾಗುವುದು. ಉರ್ದು ಶಾಲೆಗಳ ಗುಣಮಟ್ಟ ಬಲಪಡಿಸ ಲಾಗುವುದು. ತಾಲ್ಲೂಕು ಮಟ್ಟದ ಸೌಹಾರ್ದತಾ ಸಮಿತಿಗಳನ್ನು ರಚಿಸ ಲಾಗುವುದು.

18. ವಸತಿಯೊಂದು ಮೂಲಭೂತ ಅವಶ್ಯಕತೆ ಎಂದು ಪರಿಗಣಿಸಿ ಮುಂದಿನ 5 ವರ್ಷಗಳಲ್ಲಿ ನನ್ನ ಸರ್ಕಾರ ವಸತಿಹೀನ ಕುಟುಂಬಗಳಿಗೆ ವಸತಿ ಒದಗಿಸುವ ಗುರಿ ಇಟ್ಟುಕೊಂಡಿದೆ. ರಾಜ್ಯದ ಕೊಳಚೆ ಪ್ರದೇಶಗಳಲ್ಲಿ ಸಾಧ್ಯವಾದಷ್ಟು, ವಾಸವಿರುವ ಸ್ಥಳದಲ್ಲೇ ಮನೆ ಕಟ್ಟುವುದನ್ನು ಪ್ರೋತ್ಸಾಹಿಸಲಾಗುವುದು ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

19. ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ವಿಶೇಷ ಗಮನಹರಿಸಲಿದೆ. ಮೀನುಗಾರಿಕೆಗೆ ಜೆಟ್ಟಿಗಳ ನಿರ್ಮಾಣ, ಅವುಗಳ ಸುವ್ಯವಸ್ಥೆ, ಹೂಳೆತ್ತಲು ವ್ಯವಸ್ಥಿತ ಕ್ರಮ, ಶೈತ್ಯಾಗಾರ ನಿರ್ಮಾಣ ಮತ್ತು ಮೀನುಗಾರರಿಗೆ ವಸತಿ ಯೋಜನೆಯನ್ನು ರೂಪಿಸಲಾಗುತ್ತದೆ. ಒಳನಾಡಿನ ಮೀನುಗಾರಿಕೆಗೆ ವಿಶೇಷ ಪ್ರೋತ್ಸಾಹವನ್ನು ನೀಡಲು ಉದ್ದೇಶಿಸಲಾಗಿದೆ.

20. ರೇಷ್ಮೆ ಕೃಷಿಕರ ಮತ್ತು ಉದ್ಯಮದ ಸ್ಥಿತಿಯನ್ನು ಉತ್ತಮಗೊಳಿಸಲು ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ರೇಷ್ಮೆಗೆ ಬೆಂಬಲ ಬೆಲೆ ನೀಡುವುದು, ರೇಷ್ಮೆ ವ್ಯವಸಾಯ ಮತ್ತು ಮಾರುಕಟ್ಟೆಗೆ ಅಭಿವೃದ್ಧಿಗೆ ವಿಶೇಷ ಗಮನ ನೀಡಲಾಗುವುದು. ನೇಕಾರರ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

21. ತೋಟಗಾರಿಕಾ ಉತ್ಪನ್ನಗಳಾದ ಹಣ್ಣು ತರಕಾರಿಗಳಿಗೆ ಯೋಗ್ಯ ಮಾರುಕಟ್ಟೆ ಹಾಗೂ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಆದ್ಯತೆ ನೀಡಲಾಗುವುದು. ತೆಂಗು, ಅಡಿಕೆ, ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುವುದು ಹಾಗೂ ಬೆಲೆ ಕುಸಿತದ ಸಂದರ್ಭದಲ್ಲಿ ಬೆಂಬಲ ಬೆಲೆ ನೀಡಲು ಕ್ರಮ ಕೈಗೊಳ್ಳಲಾಗುವುದು.

22. ಸಹಕಾರ ಕ್ಷೇತ್ರವು ಜವಾಬ್ದಾರಿಯುತ ಹಾಗೂ ಸ್ವಾವಲಂಬಿ ಆರ್ಥಿಕ ಉದ್ಯಮವಾಗಲು ಸೇವಾವಲಯವಾಗಿ ಬೆಳೆಯಲು ಎಲ್ಲಾ ನೆರವನ್ನು ನೀಡಲಾಗುವುದು. ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದಂತಹ ಹಾಗೂ ಇಂದಿನ ಅಗತ್ಯಗಳಿಗೆ ಸ್ಪಂದಿಸುವಂತೆ ಸಹಕಾರಿ ಕಾನೂನನ್ನು ಪರಾಮರ್ಶಿಸಲಾಗುವುದು.

23. ಜಾಗತಿಕ ಹವಾಮಾನ ಬದಲಾವಣೆ ಮತ್ತು ಉಷ್ಣತೆಯ ಏರಿಕೆಯು ಪ್ರಪಂಚದೆಲ್ಲೆಡೆ ಹೊಸ ಸಮಸ್ಯೆಗಳಿಗೆ ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲಿ ನನ್ನ ಸರ್ಕಾರವು ಪರಿಸರ ಸ್ನೇಹಿ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಪ್ರತಿ ವರ್ಷ ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು.

24. ಕನ್ನಡ ಭಾಷೆಯು ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ಭಾಷೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ವಿಚಾರವಾಗಿ ಕೇಂದ್ರ ಸರ್ಕಾರದ ಮುಂದೆ ಅನೇಕ ಬಾರಿ ಪ್ರಸ್ತಾಪಿಸಲಾಗಿತ್ತು. ರಾಜ್ಯ ಸರ್ಕಾರವು ಮತ್ತೊಮ್ಮೆ ಕನ್ನಡ ಭಾಷೆಗೆ ಆ ಸ್ಥಾನಮಾನ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದು. ಕರ್ನಾಟಕವು ವಿಶಿಷ್ಟ ಕಲೆ–ಸಂಸ್ಕೃತಿಗಳ ಸಂಗಮ ದಂತಿದ್ದು, ಈ ವೈಶಿಷ್ಟ್ಯವನ್ನು ಎತ್ತಿಹಿಡಿಯಲು ನನ್ನ ಸರ್ಕಾರ ಪ್ರೇರಕನ ಪಾತ್ರ ವನ್ನು ವಹಿಸುವುದು. ನಾಡು ನುಡಿ ಬಗ್ಗೆ ಸ್ವಾಭಿಮಾನ ಹೆಚ್ಚಿಸುವ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗುವುದು. ಈಗಾಗಲೇ ತೀರ್ಮಾನಿಸಿರುವಂತೆ ಬೆಳಗಾವಿ ಯಲ್ಲಿ ಸುವರ್ಣ ವಿಧಾನ ಸೌಧದ ನಿರ್ಮಾಣಕ್ಕೆ ಶೀಘ್ರ ಚಾಲನೆ ನೀಡಲಾಗುವುದು.

25. ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನನ್ನ ಸರ್ಕಾರ ಈಗಿರುವ ಯೋಜನೆ ಗಳನ್ನು ಸಮರ್ಪಕವಾಗಿ ಹಾಗೂ ತ್ವರಿತಗತಿಯಲ್ಲಿ ಮುಂದುವರೆಸುವುದಲ್ಲದೆ

ಕರ್ನಾಟಕ ರಾಜ್ಯವನ್ನು ಉತ್ತಮ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಒಂದು ವಿಸ್ತೃತ ಯೋಜನೆ ರೂಪಿಸುತ್ತದೆ.

26. ನಮ್ಮ ಜನಸಂಖ್ಯೆಯ ಬಹುಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಕರ್ನಾಟಕ ರಾಜ್ಯವು ವೇಗವಾಗಿ ನಗರೀಕರಣಗೊಳ್ಳುತ್ತಿದೆ. ಶೇಕಡಾ 35ರಷ್ಟು ಜನಸಂಖ್ಯೆಯು ಪಟ್ಟಣ/ನಗರಗಳಲ್ಲಿ ವಾಸಿಸುತ್ತಿದ್ದು, ಈ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಆದ್ದರಿಂದ ನನ್ನ ಸರ್ಕಾರವು ಒಂದು ನಗರಾಭಿವೃದ್ಧಿ ನೀತಿಯನ್ನು ರಚಿಸಿ, ನಮ್ಮ ಪಟ್ಟಣ ಮತ್ತು ನಗರಗಳ ಅಭಿವೃದ್ಧಿಗಾಗಿ ಸೂಕ್ತ ಗಮನವನ್ನು ಹರಿಸುತ್ತದೆ. ಈ ಸಂದರ್ಭದಲ್ಲಿ "ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಲಭ್ಯಗಳನ್ನು ಒದಗಿಸುವ" (PURA) ಬಗ್ಗೆ ಅವಕಾಶ ಕಲ್ಪಿಸಲಾಗುವುದು.

27. ಬೆಂಗಳೂರು ಈಗ ಬೃಹತ್ ಬೆಂಗಳೂರಾಗಿದೆ. ನಗರಪಾಲಿಕೆ ಕ್ಷೇತ್ರ 226 ಚದರ ಕಿ.ಮೀ.ಗಳಿಂದ 800 ಚದರ ಕಿ.ಮೀ.ಗಳಿಗೆ ಹೆಚ್ಚಾಗಿದೆ. ಜಾಗತಿಕವಾಗಿ ಬೆಂಗಳೂರಿನ ಪ್ರಾಮುಖ್ಯತೆ ಬೆಳೆದಿದೆ. ಈ ಬೆಳವಣಿಗೆಯ ಜೊತೆಯಲ್ಲಿ ಹೊಸ ಸಮಸ್ಯೆಗಳು ಬಂದೊದಗಿವೆ. ವಾಹನ ದಟ್ಟಣೆ, ನೀರು ಪೂರೈಕೆ, ಒಳ ಚರಂಡಿ ಮತ್ತು ಪರಿಸರ ಮಾಲಿನ್ಯ ಮುಂತಾದವು ಪ್ರಮುಖ ಸಮಸ್ಯೆಗಳಾಗಿವೆ. ಇದಲ್ಲದೆ ಅನಧಿಕೃತ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳ ಮತ್ತು ನಿಯಮ ಮೀರಿ ನಿರ್ಮಿಸಿರುವ ಕಟ್ಟಡಗಳನ್ನು ಸಕ್ರಮಗೊಳಿಸುವ ಬಗ್ಗೆ ಮತ್ತು ಆಸ್ತಿ ತೆರಿಗೆಯನ್ನು (ಸಿ.ವಿ.ಎಸ್.) ಮರುಪರಿಶೀಲಿಸಲಾಗುವುದು. ಬೆಂಗಳೂರಿನ ಮೂಲಭೂತ ಸೌಲಭ್ಯ ಅಭಿವೃದ್ಧಿಗೆ ಪ್ರತ್ಯೇಕವಾದ ನಿಧಿ ಮತ್ತು ಕೋಶವನ್ನು ಸ್ಥಾಪಿಸುವುದು ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

28. ರಾಜ್ಯದಲ್ಲಿ ಏಕರೂಪದ ಹಿಂದೂ ಧಾರ್ಮಿಕದತ್ತಿ ಕಾಯ್ದೆ ಜಾರಿಗೆ ಬಂದಿದ್ದು, ಅದರ ಬಗ್ಗೆ ಮನವಿಗಳು ಬಂದಿರುವ ಹಿನ್ನೆಲೆಯಲ್ಲಿ ಹಿಂದೂ ದೇವಾಲಯಗಳ ಮತ್ತು ಧಾರ್ಮಿಕದತ್ತಿ ಸಂಸ್ಥೆಗಳ ಸ್ವಾಯತ್ತತೆಯನ್ನು ರಕ್ಷಿಸಲು ಈ ಕಾಯ್ದೆಗೆ ಸೂಕ್ತ ತಿದ್ದುಪಡಿ ಮಾಡಲಾಗುವುದು.

29. ರಾಜ್ಯದಲ್ಲಿ 114 ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿರುತ್ತವೆ. ಪ್ರಾದೇಶಿಕ ಹಿಂದುಳಿದಿರುವಿಕೆಯ ಪ್ರೊ.ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ಕಳೆದ ಎರಡು ಸಾಲಿನಲ್ಲಿ ಅನುದಾನವನ್ನು ಒದಗಿಸಿದ್ದು, ಮುಂದಿನ ವರ್ಷಗಳಲ್ಲೂ ಇದರ ಅನುಷ್ಠಾನಕ್ಕೆ ವಿಶೇಷ ಗಮನಹರಿಸಲಾಗುವುದು.

30. ಐತಿಹಾಸಿಕ ಕಾರಣಗಳಿಂದ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶವು ಇನ್ನೂ ಹಿಂದುಳಿದಿದೆ. ಆಂಧ್ರಪ್ರದೇಶದ ತೆಲಂಗಾಣ ಮತ್ತು ಮಹಾರಾಷ್ಟ್ರದ

ವಿದರ್ಭಾ ಪ್ರದೇಶಗಳು ಸಂವಿಧಾನ 371ನೇ ವಿಧಿಯನ್ವಯ ವಿಶೇಷ ಸ್ಥಾನಮಾನವನ್ನು ಪಡೆದಿವೆ. ಆದರೆ ಅದೇ ಪರಿಸ್ಥಿತಿ ಇರುವ ಹೈದರಾಬಾದ್ ಕರ್ನಾಟಕ ಪ್ರದೇಶಗಳಿಗೆ ಕೇಂದ್ರ ಸರ್ಕಾರವು ಈ ಸ್ಥಾನಮಾನವನ್ನು ವಿಸ್ತರಿಸಿರುವುದಿಲ್ಲ. ಆದಕಾರಣ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುವುದು.

31. ನಮ್ಮ ಜನತೆಯ ಜೀವನಶೈಲಿಯಲ್ಲಿ ತ್ವರಿತ ಬದಲಾವಣೆಯನ್ನು ತರಲು, ಆಡಳಿತ ಸುಧಾರಣೆಯು ಅವಶ್ಯಕವಾಗಿದೆ. ಸರಕಾರವು ಕಾರ್ಯ ನಿರ್ವಹಿಸಬೇಕಾದ ರೀತಿಯ ವಿಚಾರದಲ್ಲಿ ಹೊಸ ಆಲೋಚನೆಗಳ ಅಗತ್ಯವಿದೆ. ಜನತೆಗೆ ನೀಡಬೇಕಾದ ಸೇವೆಗಳು ತೀವ್ರವಾಗಿ ತಲುಪುವಂತೆ ಮಾಡಲು ನಮ್ಮ ಯೋಜನಾ ತಯಾರಿಕೆಯ ವಿಧಾನವನ್ನು ಉತ್ತಮಗೊಳಿಸಬೇಕಿದೆ. ಈ ವಿಚಾರದಲ್ಲಿ ಆಡಳಿತವು ಜವಾಬ್ದಾರಿಯುತವಾಗಿರಬೇಕು ಮತ್ತು ಜನತೆಗೆ ನಿಜವಾದ ಅಧಿಕಾರವನ್ನು ತಲುಪಿಸಬೇಕು. ಈ ಎಲ್ಲ ವಿಚಾರಗಳ ಬಗ್ಗೆ ನನ್ನ ಸರ್ಕಾರವು ಪರ್ಯಾಲೋಚಿಸುತ್ತಿದೆ. ಆಡಳಿತವು ಜನತೆಯ ಹಿತಕ್ಕಾಗಿ ಹೇಗೆ ಕೆಲಸ ಮಾಡಬೇಕು, ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬೇಕು? ಮುಂತಾದ ವಿಚಾರಗಳಲ್ಲಿ ನನ್ನ ಸರಕಾರವು ಮಾನ್ಯ ಸದಸ್ಯರುಗಳು ಸಲಹೆಗಳನ್ನು ಆಹ್ವಾನಿಸುತ್ತದೆ. ಈ ದಿಶೆಯಲ್ಲಿ ನನ್ನ ಸರಕಾರವು ವಿವಿಧ ಯೋಜನೆಗಳ ಯಶಸ್ವೀ ಅನುಷ್ಠಾನದಲ್ಲಿ ನೆರವಾಗಲು ವೃತ್ತಿಪರರ ಹಾಗೂ ತಜ್ಞರ ಸಲಹೆ, ಸೇವೆಯನ್ನು ಪಡೆಯಲು ಯೋಚಿಸುತ್ತದೆ.

32. ನಾವೀಗ ಜಾಗತೀಕರಣ ಹಾಗೂ ಉದಾರೀಕರಣದ ಯುಗದಲ್ಲಿದ್ದೇವೆ. ಕೇಂದ್ರದ ಮಟ್ಟದಲ್ಲಿ ಈ ವಿಚಾರದಲ್ಲಿ ಅನೇಕ ಸುಧಾರಣೆಗಳು ಬಂದಿರುವಂತೆಯೇ ರಾಜ್ಯ ಮಟ್ಟದಲ್ಲೂ ಸುಧಾರಣೆಗಳನ್ನು ತರುವ ಬಗ್ಗೆ, ನನ್ನ ಸರಕಾರವು ಮುಕ್ತ ಮನಸ್ಸನ್ನು ಹೊಂದಿದೆ. ತನ್ಮೂಲಕ ಚೈತನ್ಯಶಾಲೀ ಜಾಗತಿಕ, ಆರ್ಥಿಕ ಬೆಳವಣಿಗೆಯ ಲಾಭವನ್ನು ರಾಜ್ಯದಲ್ಲೂ ಪಡೆಯಲು ಕ್ರಮ ಕೈಗೊಳ್ಳುವುದು. ಈ ಬಗ್ಗೆ ಕಾನೂನು ಮತ್ತು ನಿಯಮಾವಳಿಗಳನ್ನು ಸರಳಗೊಳಿಸುವುದು, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಅಡೆತಡೆಗಳನ್ನು ನಿವಾರಿಸಲಾಗುವುದು. ಈ ದಿಶೆಯಲ್ಲಿ ಅಗತ್ಯವಿರುವ ಎಲ್ಲ ಕ್ರಮಗಳನ್ನು ನನ್ನ ಸರಕಾರವು ಕೈಗೊಳ್ಳಲಿದೆ.

33. ನನ್ನ ಸರ್ಕಾರ ಮುಂದಿನ ದಿನಗಳಲ್ಲಿ ಮೇಲಿನ ಕಾರ್ಯಕ್ರಮಗಳನ್ನು ಅನನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಕೋರುತ್ತದೆ. ಪಕ್ಷಭೇದವನ್ನು ಮರೆತು ರಾಜ್ಯದ ಪ್ರಗತಿಗೆ ತಾವೆಲ್ಲರೂ ಸರ್ಕಾರದೊಂದಿಗೆ ಸಹಕರಿಸುತ್ತೀರೆಂದು ನಂಬಿರು

ತ್ತೇನೆ. ರಾಜ್ಯಕ್ಕೆ ಒಂದು ಒಳ್ಳೆಯ ಆಡಳಿತವನ್ನು ಕೊಡಲು ನಿಮ್ಮೆಲ್ಲರ ಪಾಲುಗಾರಿಕೆಯಿಂದ ಸಾಧ್ಯವಾಗುವುದು. ರಾಜ್ಯದ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ನಾವೆಲ್ಲರೂ ಒಗ್ಗೂಡಿ ಪ್ರಯತ್ನ ಮಾಡಲು ನಮ್ಮೊಂದಿಗೆ ಸಹಕರಿಸುತ್ತೀರೆಂಬ ಭರವಸೆ ನನಗಿದೆ. ರಾಜ್ಯವನ್ನು ಕಟ್ಟುವ ಈ ಕೈಂಕರ್ಯದಲ್ಲಿ ನಿಮಗೆಲ್ಲರಿಗೂ ಶ್ರೇಯಸ್ಸಾಗಲಿ ಎಂದು ಹಾರೈಸುತ್ತೇನೆ.

ಜೈಹಿಂದ್

ಜೈ ಕರ್ನಾಟಕ

ಅನುಬಂಧ – I

Hon'ble Chairman, Karnataka Legislative Council, Hon'ble Speaker, Karnataka Legislative Assembly, Hon'ble Leader of the Opposition in the Assembly, Hon'ble Ministers and Hon'ble Members of the Karnataka Legislature.

I extend a heartly welcome to all of you to this joint session of the Karnataka Legislature. After a period of over six months under President's rule, the State has a newly elected Legislative Assembly. 90 members of this Assembly have been elected for the first time and it is a special occasion for them.

2. The State has passed through along period of political upheaval and President's Rule. I am happy that the people of Karnataka have given their verdict and a new Government led by the Bharatiya Janata Party is now in place. I wish congratulate the people of the State for the peaceful conduct of elections to the Assembly.

3. The Agenda of my Government will be Development and Responsive Governance for building a strong and prosperous Karnataka, for which the people have voted. Action will begin soon to give shape to this resolve.

4. In building a prosperous Karnataka, my Government is determined to provide the following five basic needs of the people.

a) Food

b) Health

c) Education

d) Housing

e) Peace and Social Justice

In order to facilitate fulfillment of these basic needs, my Government is contemplating redefining poverty by recognizing families as 'extremely poor' and as 'poor'.

5. All of you are aware of the importance of law and order for a welfare society. My Government will accord top priority to this aspect and exercise constant vigilance to maintain harmony amongst all communities. It will take stern action against terrorist and anti-national activities. I am confident that the Central Government will extend full cooperation in this regard. Anti-social elements indulging in land grabbing, adulteration, manufacture and sale of illicit liquor, black marketing etc will be sternly dealt with.

6. My Government is committed to the all-round development of the State. In particular, programs will be formulated to improve the lot of the farmers and to rejuvenate agriculture. This would also include dry land farming, desilting of tanks and ground water rejuvenation.

7. My Government believes in providing adequate opportunities to women in the decision making process of state and local Government institutions. Free education upto college level will be provided to girl students from BPL families. A law will be enacted to protect women against harassment in work places. Other programmes for women's development will include construction of Stree Shakti Bhavan in Taluk headquarters, guidance to promote entrepreneurship,

assistance to voluntary organizations coming forward to construct hostels for women and strengthening Self Help Groups.

8. Education and health are fundamental to achieve progress. My Government will strive towards achieving total literacy in the State and improving the quality of education at all levels. Community Health Insurance Scheme will be introduced to provide quality health care to the poor. Providing employment to the youth is one of the aims of my Government. Towards this end, skill development programmes will be formulated.

9. My Government wishes to emphasize the importance of infrastructure development. It aims to double power production to 10,000 MW during the next five years. Private sector participation will be encouraged in the power sector. The Central Government will be persuaded to invest in power generation in the State. Efforts will be made to promote non-conventional sources of energy such as wind, solar, etc. The possibility of establishing a separate grid to improve power supply in rural areas will be explored.

10. My Government will take steps to complete drinking water supply projects in rural and urban areas and will draw up a comprehensive plan for problem areas.

11. My Government will take necessary action to fully utilize the irrigation potential of the State, apart from utilizing our share of Krishna and Cauvery waters and stepping up efforts for completion of the Kalasa-Banduri drinking water project. All efforts will be made to safeguard the interest of Karnataka in the case of the Cauvery Water dispute. The State's case will be forcefully presented before the Supreme Court.

12. My Government will take up road development on priority and prepare a master plan for the purpose. It is proposed to develop some roads through Public-Private Partnership. Action will be taken to build new roads and widen existing roads where necessary in rural and urban areas. We will prevail upon the Central Government

to develop the National Highways expeditiously. Plans will be formulated for development of ports in the State.

13. The Central Government will be persuaded to complete the on-going Railway Projects in the State on priority and also take up new projects. The work relating to establishment of airports in Gulbarga, Shimoga, Hassan and Bijapur will commence shortly.

14. My Government will create the necessary environment for industrial development in the State. Keeping in view the regional specialities, it is proposed to set up separate industrial zones for steel, cement, food processing and IT&BT. Encouragement will be given to the private sector to set up industries in the backward areas of the State.

15. The fruits of information Technology must reach every village. Cyber cafes will be set up in rural areas to promote education and to enable the villagers to access information pertaining to agriculture, weather, commodity prices, employment, etc. They will also help the farmers is speedy communication with the Government.

16. My Government is deeply committed to the welfare of Monirities, Backward Classes, Scheduled Castes and Tribes. Action will be taken to improve the infrastructure in SC/ST hostels. Special attention will be paid to provide drinking water, sanction, street-lights, educational and health facilities in SC/ST colonies.

17. Assistance will be provided to the minorities to establish training centres for self-employment. Efforts will be made to improve the quality of Urdu Schools, Peace committees will be set up at the Taluk level.

18. Recognising Housing as a basic need, my Government aims to provide housing to housless families during the next five years. In-situ housing will be encouraged in slum areas to the extent possible and basic amenities will be provided.

19. Government will pay special attention to development of fisheries by construction of jetties and cold storages, and dredging operations. A plan will be prepared to provide housing for fishermen. Inland fisheries will receive special encouragement.

20. Suitable measures will be taken for development of Sericulture cultivation as well as marketing, including providing support price. My Government will take necessary measures to address the problems of handloom weavers.

21. In respect of Horticulture, priority will be given to creating suitable processing and marketing facilities. Cultivation of coconut and areca nut will be encouraged and support price provided in times of need.

22. Government will provide necessary support to the cooperative sector to emerge as a responsible and self-reliant service sector. The laws relating to cooperative societies will be reviewed, so that they are in tune with the present day needs.

23. Climate change and global warming are posing new problems across the world. My Government, therefore, wishes to underscore the importance of environment friendly development. Action will be taken to increase the forest cover in the State every year.

24. Kannada is a language with a history of 2000 years. The issue of according classical status to Kannada has been taken up on several occasions with the Central Government. The State Government will

once again strongly urge the Centre to give Kannada language its due recognition. Karnataka is a confluence of diverse arts and culture and my Government will play the role of a promoter. As already decided, the construction of Suvarna Vidhana Soudha at Belgaum will commence shortly.

25. My Government Proposed to develop Karnataka as a top class tourist destination. It will accelerate the implementation of programmes already taken up.

26. While the majority of our people live in rural areas, Karnataka is getting increasingly urbanized. 35% of our population lives in urban areas and this figure will keep growing. My Government, therefore, will formulate an Urban Development Policy to provide the necessary focus for the development of our towns and cities. At the same time, attention will be paid to provision of urban amenities in rural areas (PURA).

27. Bangalore has now become Greater Bangalore. From 226 Sq. Kms, the municipal area has grown to 800Sq. Kms. Globally, Bangalore has gained in importance. Growth has also generated problems such as high traffic density, deficiencies in water supply and sanitation and pollution. A separate cell will be set up to focus attention on the infrastructure development of Bangalore. Issues relating to regularization of unauthorized constructions and the Capital Value System (CVS) of property tax will be reviewed.

28. In the background of the representations received about the implementation of the Hindu Religious and Charitable Endowment Act, and with a view to protect the autonomy of temples and charitable institutions, suitable amendments will be made to the Act.

29. There are 114 backward taluks in the State. Provision had been made in the last two budgets for

the development of the backward regions based on the recommendations of Dr. Nanjundappa Committee report. Special attention will be paid to implementation of the report in the coming years.

30. The Hyderabad – Karnataka region has remained backward on account of historical reasons. The Telengana region of Andhra Pradesh and the Vidarbha region of Maharashtra have been accorded special status under Art 371 of the Constitution. The Central Government will be urged to extend the same status to the Hyderabad – Karnataka region.

31. Governance reforms are the key to bring about rapid transformation in the lives of our people. There is need for new thinking on the manner in which Government function. How to improve the planning process and ensure effective delivery of services, how to ensure accountability, how to motivate the employees to work for the welfare of the people and how to tackle corruption? As my Government deliberates on these issues, it welcomes suggestions from the Hon'ble Members. Government is also considering seeking the advice and services of experts and professional in the planning and implementation of its plans and programmes.

32. We are living in an era of globalization and liberalization. Just as several reforms have been effected at the central level, my Government believes that reforms at the State level are also necessary in order to reap the benefits of a global economy, Laws and procedures have to be simplified and bottlenecks on the way rapid economic and social development will have to be removed. My Government will initiate necessary action in this direction.

33. My Government seeks the cooperation of all of you in the implementation of the above programmes in the coming days. I hope you will extend your support

to the Government, irrespective of political affiliations for the overall development and progress of the State. In this venture of building a strong and prosperous Karnataka, I wish you all success.

Jai Hind

Jai Karnataka

(ಸಭೆಯು ಮಧ್ಯಾಹ್ನ 12.40 ಗಂಟೆಗೆ ಮುಕ್ತಾಯವಾಯಿತು)

(ಸದನವು 1 ಗಂಟೆ 4 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ (ಪ್ರ) : ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕಾರ್ಯದರ್ಶಿ(ಪ್ರ) : ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

3. ವಿಶ್ವಾಸ ಮತ ಕೋರುವ ಪ್ರಸ್ತಾಪ

ವಿಷಯ : ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟಕ್ಕೆ ವಿಶ್ವಾಸ ಮತವನ್ನು ಕೋರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :– ಸನ್ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾಪವನ್ನು ನಾನು ಮಂಡಿಸುತ್ತಿದ್ದೇನೆ. "ಈ ಸದನವು ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."